ಸೀಟುಗಳ ಸಂಖ್ಯೆ

ವಿಷಯ : - ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಥಮಿಕ ಬ್ರಾಂಚ್ ಶಾಲೆಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 330(455)

ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೊಂದಿಕೊಂಡರಂತೆ ಇರುವ ಬ್ರಾಂಚ್ ಶಾಲೆಗಳ ಸಂಖ್ಯೆ ಎಷ್ಟು?

ಆ) ಇದರಲ್ಲಿ ಭದ್ರಾವತಿ ತಾಲ್ಲೂಕು ಮತ್ತು ಚನ್ನಗಿರಿ ತಾಲ್ಲೂಕಿನಲ್ಲಿ ಎಷ್ಟು ಬ್ರಾಂಚ್ ಶಾಲೆಗಳಿರುತ್ತವೆ ಹಾಗೂ ಆದರಲ್ಲಿ 1ರಿಂದ 4ನೇ ತರಗತಿಯವರೆಗೆ ಮತ್ತು 1ರಿಂದ 7ನೇ ತರಗತಿಯವರೆಗೆ ಎಷ್ಟು ಗ್ರಾಮಗಳಲ್ಲಿ ಬ್ರಾಂಚ್ ಶಾಲೆಗಳಿವೆ?

ಇ) ಈ ಬ್ರಾಂಚ್ ಶಾಲೆಗಳಿಗೆ ಖಾಯಂ ಹುದ್ದೆಗಳನ್ನು ನಿಗದಿಮಾಡಿ ಮಂಜೂರು ಮಾಡಲಾಗಿರುವುದೇ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ
(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

85

		1ರಿಂದ 4ನೆ ೇ ತರಗತಿ		1ರಿಂದ 7ನೇ ತರಗತಿ
ಭದ್ರಾವತಿ -12	-	12	-	ಇಲ್ಲ
ಚನ್ನಗಿರಿ - 09	-	09	-	ಇಲ್ಲ

ಮಂಜೂರು ಮಾಡಿಲ್ಲ

ವಿಷಯ : - ಶಿವಮೊಗ್ಗ ಜಿಲ್ಲೆಯಲ್ಲಿ ಖಾಲಿಯಿರುವ ಪ್ರಾಥಮಿಕ ಉಪಾಧ್ಯಾಯರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 331(456)

ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಶಾಲೆಗಳಿಗೆ ಮುಖ್ಯೋಪಾಧ್ಯಾಯರು ಹಾಗೂ ಉಪಾಧ್ಯಾಯರುಗಳು ಇರುವರು (ತಾಲ್ಲೂಕುವಾರು ಸಂಖ್ಯೆಗಳನ್ನು ನೀಡುವುದು);

ಆ) ಈಗ ಹುದ್ದೆಗಳು ಖಾಲಿಯಿದ್ದರೆ ಎಷ್ಟು ದಿವಸದಲ್ಲಿ ಇವುಗಳನ್ನು ತುಂಬಲಾಗುವುದು;

ಇ) ಈಗ ಖಾಲಿಯಿರುವ ಹುದ್ದೆಗಳನ್ನು ತುಂಬಲು ತಡವಾದರೆ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅನುಕೂಲ ಮಾಡುವುದಕ್ಕೆ ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಹಿರಿಯ ಪ್ರಾಥಮಿಕ ಶಾಲೆಗಳು - 848

ಕಿರಿಯ ಪ್ರಾಥಮಿಕ ಶಾಲೆಗಳು - 1322

ಒಟ್ಟು 2170

ಇವುಗಳಲ್ಲಿ 553 ಮುಖ್ಯೋಪಾಧ್ಯಾಯರು ಹಾಗೂ 4971 ಸಹ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ತಾಲ್ಲೂಕುವಾರು ವಿವರ ಲಗತ್ತಿಸಿದೆ)

ಖಾಲಿ ಹುದ್ದೆಗಳನ್ನು ತುಂಬಲು ಸೂಕ್ತಕ್ರಮ ತೆಗೆದುಕೊಳ್ಳಲಾಗುತ್ತಿದೆ. ಶ್ರೀಘ್ರದಲ್ಲಿಯೇ ತುಂಬಲಾಗುವುದು.

ಹೆಚ್ಚುವರಿ ಶಿಕ್ಷಕರಿರುವ ಕಡೆಯಿಂದ ನಿಯೋಜನೆ ಮೇಲೆ ತುಂಬಿ ಕಾರ್ಯ ನಿರ್ವಹಿಸಲಾಗುವುದು.

ಪಶಿವಮೊಗ್ಗ ಜಿಲ್ಲೆಯಲ್ಲಿನ ಪ್ರಾಥಮಿಕ ಶಾಲೆಗಳ ಹಾಗೂ ಶಿಕ್ಷಕರ ತಾಲ್ಲೂಕುವಾರ ವಿವರ.

ತಾಲ್ಲೂಕು	ಹಿರಿಯ ಪ್ರಾಥಮಿಕ ಶಾಲೆ	ಕಿರಿಯ ಪ್ರಾಥಮಿಕ ಶಾಲೆ	ಮುಖ್ಯೋಪಾಧ್ಯಾಯರು ಸಂಖ್ಯೆ	ಸಹ ಶಿಕ್ಷಕರ ಸಂಖ್ಯೆ
1. ಭದ್ರಾವತಿ	93	164	67	642
2. ಚನ್ನಗಿರಿ	113	162	80	742
3. ಹೊನ್ನಾಳಿ	89	103	66	530
4. ಹೊಸನಗರ	83	103	51	291
5. ಸಾಗರ	96	171	60	622
6. ಶಿಕಾರಿಪುರ	91	117	55	491
7. ಶಿವಮೊಗ್ಗ	105	176	67	778
8. ಸೊರಬ	78	196	54	430
9. ತೀರ್ಥಹಳ್ಳಿ	100	130	53	445
ಒಟ್ಟು	**848**	**1322**	**553**	**4971**

ವಿಷಯ : - 59 ಪ್ರೌಢಶಾಲೆಗಳಿಗೆ ಅನುದಾನದ ಭರವಸೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 332(166)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ವಿಧಾನಸಭಾ ಅಧಿವೇಶನದಲ್ಲಿ ಮಾನ್ಯ ಶಿಕ್ಷಣ ಸಚಿವರು 59 ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಭರವಸೆಯನ್ನು ನೀಡಿದ್ದು ಅದನ್ನು ಇದುವರೆಗೂ ಕಾರ್ಯಗತ ಮಾಡದೇ ಇರಲು ಕಾರಣವೇನು;

ಆ) ಈ ಹಿಂದೆ ನಾಗರಾಜು ಸಮಿತಿಯು ಅನುದಾನ ಬಿಡುಗಡೆ ಮಾಡುವ ಬಗ್ಗೆ ವರದಿ ಮಾಡಿದ್ದರೂ ಸಹ ಅನುದಾನವನ್ನು ಬಿಡುಗಡೆ ಮಾಡದೆ ಪುನಃ ಅಸ್ತಿತ್ವದಲ್ಲಿಲ್ಲದೆ ಇರುವ ಆ ಸಮಗ್ರ